# ಅಮೃತಕ್ಕೆ ಹಾರುವ ಗರುಡ



ಕಾವ್ಯ ನಾಟಕಗಳನ್ನು ರಚಿಸುವುದರಿಂದ ಮತ್ತು ಓದುವುದರಿಂದ ಏನು ಪ್ರಯೋಜನ ಎಂದು ಕವಿಗಳು, ಲಾಕ್ಷಣಿಕರು ಸಾವಿರಾರು ವರ್ಷಗಳ ಹಿಂದೆಯೇ ಜಿಜ್ಞಾಸೆ ನಡೆಸಿದ್ದಾರೆ. ಕಾವ್ಯದಿಂದ ಕೀರ್ತಿ ಮತ್ತು ಹಣದ ಗಳಿಕೆ, ಅಮಂಗಳದ ನಿವಾರಣೆ ಆಗುತ್ತದೆ ಅನ್ನುವುದರ ಜೊತೆ ಕಾವ್ಯ ಓದಿದವರಿಗೆ ಇಷ್ಟಾಂಗನಾ ಸುರತ ಲಭ್ಯವಾಗಲಿ ಎಂಬ ಹಾರೈಕೆಯೂ ಇದೆ. ಜನ ಬದುಕಲಿ ಎಂದು ಕಾವ್ಯ ರಚಿಸಿದವರು, ಜನರ ನೋವುನಲಿವುಗಳನ್ನು ಕಾವ್ಯ ಮಾಡಿದವರು ಇದ್ದಾರೆ. ಕಾವ್ಯವೆನ್ನುವುದು ಅಮೃತಕ್ಕೆ ಹಾರುವ ಗರುಡ ಎಂದವರಿದ್ದಾರೆ.

ಕಾಲ ಬದಲಾದ ಹಾಗೆ ಕಾವ್ಯದ, ಅಂದರೆ ಒಟ್ಟಾರೆ ಸಾಹಿತ್ಯದ ಉದ್ದೇಶವೂ ಬದಲಾಗಿದೆ; ಕಾಲ ಬದಲಾದ ಹಾಗೆ ಓದುಗರೂ ಬದಲಾಗಿದ್ದಾರೆ. ಆದರೂ "ಸಾಹಿತ್ಯದಿಂದ ಏನು ಪ್ರಯೋಜನ?'' ಎನ್ನುವುದು ನಿರಂತರವಾಗಿ ನಡೆಯುವ ಚರ್ಚೆ. ಅದು ಸಾಹಿತ್ಯವನ್ನೂ ಕ್ರಿಯಾಶೀಲತೆಯನ್ನೂ ಜೀವಂತವಾಗಿ ಇಟ್ಟಿದೆ.

ಆಧುನಿಕ ಕಾಲದ ಯುವಜನತೆ ಸಾಹಿತ್ಯ ಕುರಿತು ಯಾವ ರೀತಿ ಆಲೋಚಿಸುತ್ತಾರೆ? ಬರೆಯುವವರ ಸಂವೇದನೆಯ ವಿಚಾರ ಇರಲಿ, ಓದುವವರ ಸಂವೇದನೆ ಹೇಗೆ ಬದಲಾಗುತ್ತಿದೆ? "ಇಂದಿನ ಯುವ ಜನತೆಗೆ ಮಾತೃಭಾಷೆಯೇ ಸರಿಯಾಗಿ ಬರುವುದಿಲ್ಲ... ಅಂಥ ಸಮಯದಲ್ಲಿ ಹಿಂದಿನಂತೆಯೇ ವಿಪುಲವಾಗಿ ಕಾದಂಬರಿ ಬರೆಯುವುದು ಅನಗತ್ಯ ಅನ್ನಿಸಿತು. ಪ್ರತಿಯೊಬ್ಬ ಓದುಗನ ಮಾನಸಿಕ ಸ್ಥಿತಿ ಹೇಗೆ ಬದಲಾಗತೊಡಗಿದೆ ಅಂದರೆ, ಈ ಪುಸ್ತಕ ಖರೀದಿಸಿದರೆ ಅದರಿಂದ ವೈಯಕ್ತಿಕವಾಗಿ ಏನು ಪ್ರಯೋಜನ ಎಂದು ಅವನು ಕೇಳಿಕೊಳ್ಳುತ್ತಾನೆ'' ಎಂದು ಯಂಡಮೂರಿ ವೀರೇಂದ್ರನಾಥ್ ಹೇಳುವ ಮಾತುಗಳು ಎಷ್ಟೋ ಸಾಹಿತಿಗಳ ಮಾತಾಗಿರಬಹುದೆ?

ಸಾಹಿತ್ಯವೆನ್ನುವುದು ಮಾರುಕಟ್ಟೆಯ ಸರಕಾಗಿ ಬಹಳ ಕಾಲವಾಗಿದೆ. ಆದರೂ "ಮಯೂರ''ದ ಪಾಲಿಗೆ ಸಾಹಿತ್ಯ ಬೇಂದ್ರೆಯವರು ಹೇಳಿದಂತೆ ಅಮೃತಕ್ಕೆ ಹಾರುವ ಗರುಡ.

● **ಆರ್. ಪೂರ್ಣಿಮಾ**